No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 31 ಸಂಚಿಕೆ 218] ಬುಧವಾರ 11–8–48 [ಬಿಡಿ ಪ್ರತಿ 3 ಪೈ

ಹೈದರಾಬಾದ್ ಆರೋಗ್ಯ ಮಂತ್ರಿ ಶ್ರಿಯವರ ರಾಜೀನಾಮೆ ಅರ್ಪಣೆ

ಸು ದ್ದಿ ಗ ಳು

ಬೆಂಗಳೂರು ಕಂಟೋನ್ಮೆಂಟ್ ಪಾರಸಭೆ ರಾಜಾಜಿಗೆ ಪ್ರತ್ಯೇಕ ಬಿನ್ನವತ್ತಳೆ ಆರ್ಪಿಸುವ ಬಗ್ಗೆ ಸರ್ಕಾರದ ಅಪ್ಪಣೆ ದೊರೆತೆದೆ.

ಕಾಶ್ಮೀರ ಆಕ್ರಮಣಾರಂಭ ಮುನ್ನ ಪಾಕೀಸ್ತಾನದಿಂದ ಸಂಧಾನಕ್ಕಾಗಿ ನನಗೆ ಆಹ್ವಾನ ಬಂತು. ಆಹ್ವಾನವನ್ನು ಮನ್ನಿಸಿದ್ದರೆ ನಾನು ಪಾಕೀಸ್ತಾನದ ಸೆರೆಯಾಳಾಗುತ್ತಿದ್ದೆ. ಕಾಶ್ಮೀರಿಗಳು ಪಾಕೀಸ್ತಾನ ಸೇರಬೇಕು ಎಂದು ನನ್ನ ಹೆಸರಿನಲ್ಲಿ ಹೇಳಿಕೆಯಿತ್ತು ಮೋಸ ಮಾಡಲು ಮಾಡಿದ ಫಿತೂರಿ ದೈವಾನುಗ್ರಹದಿಂದ ಫಲಿಸಲಿಲ್ಲ

ಎಂದು ಪ್ರಧಾನಿ ಷೇಕ್ ಅಬ್ದುಲ್ಲ ಕಾಶ್ಮೀರದಲ್ಲಿ ಈದ್ ಭಾಷಣ ಮಾಡುತ್ತಾ ತಿಳಿಸಿದ್ದಾರೆ.

ಸಂಡೂರು ಸಂಸ್ಥಾನವನ್ನು ಸ್ವತಂತ್ರವೆಂದು ಘೋಷಿಸಲು ಪ್ರಯತ್ನವಾಗುತ್ತಿದೆಯೆಂದು ವರದಿ

ಬೂಂಬಾಯಿ ಪೌರಸಭೆ ಕಾಂಗ್ರೆಸ್ ಪಕ್ಷದ ನಾಯಕತ್ವಕ್ಕೆ ಬೊಂಬಾಯಿ ಪ್ರಾಂತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಕೆ. ಪಾಟೀಲ್ ರಾಜೀನಾಮೆಕೊಟ್ಟರು.

ವಿದರಾಸಿನಲ್ಲಿ ಮುಂದಿನ ಮಾಹೆ ತಾ|| 5 ನೆ ತ್ತು 6 ರಲ್ಲಿ ಸಮಾವೇಶವಾಗುವ ಭಾರತ ಡೊಮಿನಿಯನ್ ಮುಸ್ಲಿಂ ಕರ್ವೆರ್ಷನ್ ಸಮ್ಮೇಳನದಲ್ಲಿ ಹೈದರಾಬಾದ್ ಮತ್ತು ಕಾಶ್ಮೀರ ಸಮಸ್ಯೆಗಳನ್ನು ಪ್ರಾಮುಖ್ಯವಾಗಿ ಪರಿಶೀಲಿಸಲಾಗುವುದು.

ಸ್ವಾತಂತ್ರ್ಯೋತ್ಸವ ಪ್ರಯುಕ್ತ ಅಂಚೇ ಇಲಾಖೆಗೆ ತಾ|| 16 ನೇ ಸೋಮವಾರ ರಜಾ ಕೊಡಲಾಗುವುದೆಂದು ಬೆಂಗಳೂರು ಸುದ್ದಿ

ಬಂಗಾಳ ರಾಜಕೀಯ ದುರವಸ್ಥೆಗೀಡಾದವರ ಸಮ್ಮೇಳನ ಕಲ್ಕತ್ತೆಯಲ್ಲಿ ಸೇರಿ ಶ್ರೀ ಅರವಿಂದಘೋಸರಿಗೆ ಭಾರತದ ನಾಯಕತ್ವ ವಹಿಸಬೇಕೆಂದು ಆಹ್ವಾನಿಸಿದೆ

ಭಾರತ ಎಂಥಹ ಪರಿಸ್ಥಿತಿಯಲ್ಲಾದರು ಕಾಲುಕೆರೆದು ಜಗಳಕ್ಕೆ ಸಿದ್ಧವಿಲ್ಲ ಆದರೆ, ಅನಿವಾರ್ಯವಾದರೆ ಶಸ್ತ್ರಾಸ್ತ್ರ ಸನ್ನದ್ಧರಾಗಲು ನಾವು ಸಿದ್ಧ ಎಂದು ಪಂ|| ನೆಹರು ಸ್ವಾತಂತ್ರ್ಯಾರಂಭ ಭಾಷಣ ಮಾಡುತ್ತಾ ದೆಹಲಿಯಲ್ಲಿ ತಿಳಿಸಿದ್ದಾರೆ

ತಾ || 15 ಮತ್ತು 16 ರಲ್ಲಿ ಶ್ರೀಮನ್ಮಹಾರಾಜರು ಮಂಡ್ಯ ಜಿಲ್ಲೆ ಪ್ರವಾಸ ಮಾಡುವರೆಂದು ಗೊತ್ತಾಗಿದೆ

ಹರಿಜನರಿಗೆ ಆಯುಷ್ಕರ್ಮ ಮಾಡುವುದಿಲ್ಲವೆಂದು ಹಾಸನ ಕ್ಷೌರಿಕರು ಸಂಘ ಹೂಡಿದ್ದಾರೆ.

ಹೈದರಾಬಾದ್ ಪ್ರದೇಶಕ್ಕೆ ಸಮೀಪವಾದಿಗಳೆಲ್ಲರೂ ಜರೂರಾಗಿ ನಾಗ್ಪುರಿಗೆ ನಿಜಾಂ ವಿರುದ್ಧ ರೈತ ಕಾರ್ಮಿಕರನ್ನು ದಂಗೆ ಎಬ್ಬಿಸಬೇಕು ಎಂದು ಶ್ರೀಮತಿ ಅರುಣ ಆಸಫಾಲಿ ಕರೆ ಕೊಟ್ಟಿರುವುದಾಗಿ ದೆಹಲಿ ವರದಿ

ಭಾರತ ಮುಸ್ಲಿಂರೆಲ್ಲರೂ ಕೇಂದ್ರ ಮತ್ತು ಸಾಮ್ರಾಂತ್ಯ ಪ್ರಭುತ್ವಗಳಿಗೆ ಸಂಪೂರ್ಣ ಬೆಂಬಲವಿತ್ತು ದೇಶದಲ್ಲಿ ಜಾತಿ ಐಕ್ಯತೆ ಸ್ಥಾಪಿಸಬೇಕೆಂದು ಮಧ್ಯ ಪ್ರಾಂತ್ಯ ಮುಸ್ಲಿಂ ಲೀಗ್ ಕಾರ್ಯದರ್ಶಿ ಶ್ರೀ ಎಸ್. ಜಿ ಕಾಜಿಯವರು ಪ್ರಾರ್ಥಿಸಿದ್ದಾರೆ

ಬರೋಡ ಮಹಾರಾಜರು ಸಾರ್ವಜನಿಕ ಹಣವನ್ನು ದುರುಪಯೋಗಿಸಿಕೊಂಡ ಬಗ್ಗೆ ತನಿಖೆಮಾಡಲು ಸಮಿತಿಯೊಂದನ್ನು ರಚಿಸಬೇಕೆಂದು ಬರೋಡ ಶಾಸನ ಸಭೆ ನಿರ್ಣಯಿಸಿದೆ

ಗಾಂಧೀಜೀ ಸ್ಮಾರಕ ಅಂಚೆ ಚೀಟಿಗಳು

ಮೈಸೂರು, ಆ 11

ಭಾರತದ ಪ್ರಥಮ ಸ್ವಾತಂತ್ರ್ಯ ವಾರ್ಷಿಕೋತ್ಸವ ಆಗಸ್ಟ್ ತಾ || 15 ರಲ್ಲಿ ಗಾಂಧೀಜೀ ಸ್ಮಾರಕ ಅಂಚೆ ಚೀಟಿಗಳು ಮಾರಾಟಕ್ಕಿಡಲ್ಪಡುವುದು ಆ ದಿನ ಭಾನುವಾರವಾಗಿದ್ದರೂ ಸಹ ಜನಗಳ ಪೂರೈಕೆಗಾಗಿ ಮೈಸೂರು ಪ್ರಧಾನ ಅಂಚೆ ಕಛೇರಿಯಲ್ಲಿ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 4 ಗಂಟೆ ವರೆಗೆ ಮಾರಾಟ ಮಾಡಲಾಗುವುದು

ಹೈದರಾಬಾದ್ ಆರೋಗ್ಯ ಸಚಿವ ಶ್ರೀ ಮಲ್ಲಿಕಾರ್ಜುನಪ್ಪನವರು ತಮ್ಮ ಪದವಿಗೆ ರಾಜೀನಾಮೆ ಇತ್ತರು. 7 ಜನ ಲಿಂಗಾಯಿತ ಸದಸ್ಯರು ಶಾಸನ ಸಭೆಗೆ ರಾಜೀನಾಮೆ ಇತ್ತರು. ಗೂಂಡಾ ಆಡಳಿತವೇ ಕಾರಣ ಸಮಪ್ರಾತಿನಿಧ್ಯ ಆಧಾರದ ಮೇಲೆ ರಚಿಸುವ ನೂತನ ಮಂತ್ರಿಮಂಡಲಕ್ಕೆ ಶ್ರೀಮತಿ ಪದ್ಮಜಾ ಯ್ಡುರನ್ನು ತೆಗೆದುಕೊಳ್ಳಲಾಗುವ್ದ

ಸರ್ಕಾರದ ಡಿ-ಕಂಟ್ರೋಲ್ ಮುರಿದುಬಿತ್ತೆಂದು ಪಂ| ನೆಹ್ರು ಒಪ್ಪಿದ್ದಾರೆ.

15 ನೇ ತಾ | ಮದ್ರಾಸು ಸರ್ಕಾರ 4 ಸಾವಿರ ಖೈದಿಗಳನ್ನು ಬಿಡುವುದು.

ನವದೆಹಲಿ, ಆ 10 — ಸರ್ದಾರ್ ಪಟೇಲರು ಈ ದಿನ ಡೊಮಿನಿಯನ್ ಪಾರ್ಲಿವೆಂಟಿನಲ್ಲಿ ಹೈದರಾಬಾದು ಬಗ್ಗೆ ಶ್ವೇತಪತ್ರವಿಟ್ಟರು ಹೈದರಾಬಾದಿನಿಂದ ಇದುವರಿಗೆ ಆದ 197 ಧಾಳಿಗಳಿಂದ 73 ಮಂದಿ ಸತ್ತು 9 ಲಕ್ಷ ರೂ ನಷ್ಟವಾಗಿದೆಯೆಂದು ಅವರು ತಿಳಿಸಿದರು

ಚಿತ್ರದುರ್ಗ 'ನವೋದಯ' ಕಾರ್ಯಾಲಯದಲ್ಲಿ ಕಳ್ಳತನ ಮಾಡಿದ್ದ ಎ ಹನುಮಂತರಾವ್ ಎಂಬಾತನಿಗೆ 3 ತಿಂಗಳು ಕಠಿಣ ಸಜೆ ವಿಧಿಸಲಾಗಿದೆ

ದೇಶದ ಎಲ್ಲ ಕಡೆಗೂ ಆಹಾರ ಸಾಗಿಸಲು ಭಾರತ ಸರ್ಕಾರ 40 ವಿಶೇಷ ರೈಲುಗಳನ್ನು ಏರ್ಪಡಿಸುವುದು

At Opera
7–8–48 ರಿಂದ
VISWAS
ಸುರೇಂದ್ರ, ಮೆಹತಾಬ್, ಬೇಬಿ ಮಾಧುರಿ ಪಾತ್ರವಹಿಸಿರುವ
ವಿ ಶ್ವಾ ಸ್
(ಆಮೋಘ ಹಿಂದಿ ಚಿತ್ರ)
.... ಪ್ರತಿದಿನ 3 ಆಟಗಳು ....

ನಿಗ್ಬಂಧನದ ಪರಿಣಾಮ

ಹೈದರಾಬಾದಿನಲ್ಲಿ ಬಟ್ಟೆ ಅಭಾವ

ನಾಗಪುರ, ತಾ|| 30 — ಭಾರತ ಒಕ್ಕೂಟದ ಗಡಿಯಲ್ಲಿರುವ ಹೈದರಾಬಾದ ಜಿಲ್ಲೆಗಳಲ್ಲಿ ಬಟ್ಟೆಯ ಅಭಾವವು ಕಠಿಣವಾಗಿದೆ. ನಾಂದೇಡಯೆಂಬ ಜಿಲ್ಲೆಯ ಎಲ್ಲಾ ಜವುಳಿ ಅಂಗಡಿಗಳಿಗೆ ನಿಜಾಂರು ಬೀಗ ಮುದ್ರೆ ಹಾಕಿಸಿದ್ದಾ ರೆಂತಲೂ ಜನರಿಗೆ ಮೋಸ ಮಾಡಿ ಬಟ್ಟೆ ಮಾರಿದರೆಂದೂ ಆರೋಪ ಸುದ್ದಿ ಯುಂಟು. ನಿಜಾಮರಿಗೆ ತಮ್ಮ ಪೋ ಲೀಸ ಮತ್ತು ಮಿಲಿಟರಿಗೆ ಬಟ್ಟೆ ಪೂರೈ ಸಲು ಕುತ್ತಿಗೆಗೆ ಬಂದಿದೆಯೆಂತಲೂ ಈ ವಿಷಯದಲ್ಲಿ ಅವರು ಬಹಳ ಹೆಣ ಗುತ್ತಾರೆಂತಲೂ ಹೈದರಾಬಾದಿನಿಂದ ಬಂದ ಹಿಂದೂ ನಿರಾಶ್ರಿತರು ತಿಳಿಸಿರು ತ್ತಾರೆ.

ಪದಾರ್ಥಗಳ ಬೆಲೆಗಳು ಹೆಚ್ಚಲು ಕಾರಣವೇನು

ಬ್ರಿಟಿಷರು ಯುದ್ಧದ ನಿಮಿತ್ತವಾಗಿ ತಾವಶ್ಯಕವಾದಷ್ಟು ಆಹಾರ ಸಾಮಾಗ್ರಿಗ ಳನ್ನೂ ಇತರ ಪದಾರ್ಥಗಳನ್ನೂ ಶೇಖ ರಿಸಲಿಕ್ಕಾಗಿ ಇಂಡಿಯಾ ಕರೆನ್ಸಿಯ ನ್ನೂ 172 ಕೋಟಿಗಳಿಂದ 1,200 ಕೋ ಟಿಗಳಿಗೆ ಹೆಚ್ಚಿಸಿದರು. ಕಂಟ್ರಾಕ್ಟು ಗಳ ಮೂಲಕ ಪದಾರ್ಥಗಳನ್ನು ಶೇಖ ರಿಸುವ ವಿಧಾನವನ್ನವಲಂಬಿಸಿದರು; ಕರೆನ್ಸಿ ನೋಟುಗಳನ್ನು ಕವಡೆಗಳಂತೆ ಎಸೆದರು.

ಪ್ರಜಾ ಸಾಮಾನ್ಯ ಜೀವನಕ್ಕೂ ಸೈನಿಕ ಜೀವನ ವಿಧಾನಕ್ಕೂ ಯಾವ ಬಗೆಯ ತಾರತಮ್ಯವೂ ಇಲ್ಲದೆ ಹೋ ಯಿತು. ಎಷ್ಟು ಬೆಲೆಯಾದರೂ ತಿನ್ನುವ ಧಾನ್ಯಗಳನ್ನೂ ಇತರ ಪದಾರ್ಥಗಳ ನ್ನೂ ಮಿಲಿಟರಿ ಕಂಟ್ರಾಕ್ಟರರು ಕೊಳ್ಳ ಲಾರಂಭಿಸಿದರು. ಇದೇ ಬೆಲೆಗಳು ವಿಪ ರೀತವಾಗಿ ಹೆಚ್ಚಲು ಕಾರಣವು. ಎಷ್ಟು ಕಾಲದ ವರೆಗೂ ಅಧಿಕ ಚಲಾವಣೆಯು ಇರುತ್ತದೆಯೋ ಅದುವರೆಗೂ ಅವಶ್ಯಕ ವಸ್ತುಗಳ ಬೆಲೆಯು ತಗ್ಗುವದಿಲ್ಲ.

Save the Cow

ಗೋ ವಧೆ ನಿಲ್ಲಲಿ

Edited, Printed and Published by M S Krishna Rao at th Satyavadi Press, Chamaraj Agrahar, Mysore,

ವರ್ತಮಾನ ಸಂಗ್ರಹ

ಕೇಂದ್ರ ಶಾಸನ ಸಭೆಯಲ್ಲಿ ವಸತಿ ಸಮಸ್ಯೆ ಮೇಲೆ ತೀವ್ರ ಪ್ರಶ್ನೆ ಎದ್ದು, ಪಂ|| ನೆಹರೂರವರು ಚರ್ಚೆಯಲ್ಲಿ ಪ್ರವೇಶಿಸಿ, ಅಗತ್ಯವಾಗಿ ಬೇಕಾಗಿರುವುದು ದೊರೆಯುವ ತನಕ ಭಾರತದಲ್ಲಿ ಒಂದು ಸಿನೀಮಾವನ್ನಾಗಲೀ ನಿರ್ಮಿಸಕೂಡದು. ಭಾರಿ ಭಾರಿ ಕಟ್ಟಡಗಳನ್ನು ಸಹ ನಿರ್ಮಿಸುವ ಬಗ್ಗೆ ಸರ್ಕಾರದ ಕಟ್ಟಪ್ಪಣೆ ಪಡಿಯಬೇಕು ಎಂದು ಪ್ರಾಂತೀಯ ಪ್ರಭುತ್ವಗಳಿಗೆ ತಿಳಿಸಲಾಗಿದೆ ಎಂದು ನುಡಿದರು.

ಪಾಕೀಸ್ತಾನ ಪ್ರಾರಂಭ ಪ್ರಥಮ ವಾರ್ಷಿಕೋತ್ಸವದಲ್ಲಿ ಗವರ್ನರ್ ಜನರಲ್ ಶ್ರೀ ಜಿನ್ನಾರವರು ಭಾಗವಹಿಸುವುದಿಲ್ಲವೆಂದು ತಿಳಿಸಿದ್ದಾರೆ.

ಭಾರತ ನಿಯೋಗ ಪಾರ್ಲಿಮೆಂಟರಿ ಸದಸ್ಯರಾಗಿ ಮೈಸೂರಿನ ಭಾರತ ರಾಜ್ಯಾಂಗ ಸಭಾ ಸಭ್ಯ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ಸೆಪ್ಟಂಬರ್ ತಾ|| 25 ರಲ್ಲಿ ಇಂಗ್ಲೆಂಡಿಗೆ ತೆರಳುವರು.

ಮೈಸೂರು ಜಿಲ್ಲೆಗಳ ಅರಣ್ಯಗಳಲ್ಲಿ ಹರಾಜಿಗೆಂದು ಪ್ರಕಟಿಸಲ್ಪಟ್ಟಿದ್ದ ರೂ 20000 ಕ್ಕೆ ಮೇಲ್ಪಟ್ಟು ಬೆಲೆ ಬಾಳುವ ಮರಮುಟ್ಟುಗಳು ಮಾಯವಾಗಿವೆ.

ಗಾಂಧೀಜೀ ರಾಷ್ಟ್ರೀಯ ಸ್ಮಾರಕ ನಿಧಿಗೆ ಕಲ್ಕತ್ತೆಯಲ್ಲಿರುವ ಚೀನೀಯರ ವಾಣಿಜ್ಯ ಸಂಘ ರೂ. 5770 ಕಾಣಿಕೆ ಯಿತ್ತಿದೆ.

ಸ ತ್ಯ ವಾ ದಿ

ದಿನ ಪತ್ರಿಕೆ. ತಿರಿಗಳಿಗೆ ಆರಾಣೆ

ಶ ಕ್ತಿ ಸು ಧಾ :

ದೇಹಪುಷ್ಟಿಗೆ

ಮುಖಕಾಂತಿಗೆ

ಶಕ್ತಿ ಸಾಧನೆಗೆ

ಸಂಜೀವನ

ಶಕಿಸುಧಾ



ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇ

SELECT PURE SAFRON
SHREE "OM" BRAND
VALABHDAS TEJPAL
MADRAS

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿ ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿದ. ಸ್ಪೆಷಲ್ಲಾಗಿ ಆಮದು ಮಾಡಲ್ಪಟ್ಟಿರತಕ್ಕದ್ದು ಬಹು ಹೊಳ ಸುವಾಸನೆಯಿಂದಲೂ ಕೂಡಿದುದಾಗಿದೆ ಏನೊಂದೂ ಅಕ್ಸೆಸರಿ ರ್ಥಗಳೂ ಸೇರಿಲ್ಲ, ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿ ಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸು ವ 1 ತೋಲಾ, ½ ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್‌ಪಾಲ್

ಎಳ ಗೋವಿಂದಪ್ಪ ನಾಯಕ್ ರಸ್ತೆ, ಜೆ. ಟಿ. ಮಾ